The following are some of the haadu and sthothras akkamma used to sing as she was coming out of the bathroom till she completed her pooja. These have been written down by Ramamani(Pommi) from her memory for use in this website.

# ಅಕ್ಕಮ್ಮ ದಿನ ನಿತ್ಯ ಹೇಳುತಿದ್ದ ಹಾಡು, ಸ್ತೊತ್ರಗಳು.


1 ಲಕ್ಷ್ಮೀ ಸ್ತೊತ್ರ

2 ರಾಮದೇವರ ಸ್ತೊತ್ರ

3 ಅಶ್ವತ್ಥ ನಾರಯಣ ಸ್ತೊತ್ರ

4 ಸೇತು ಬಂಧನ


## ಲಕ್ಷ್ಮೀ ಸ್ತೊತ್ರ

ಪದ್ಮಾಕ್ಷಿ! ಪದ್ಮ ಸಂಭವೇ! ಪದ್ಮ ಮಾಲಾಯೇ! ಪದ್ಮ ಪಾಣಿ! ಪದ್ಮ ಪದಯುಗೇ!!

ಪದ್ಮಾನನ ಮನ್ಮಾನಸ ಪದ್ಮದೀ ನೆಲೆಗೊಂಡು! ನಮ್ಮ ಪಾಲಿಸು ಜನನೀ!!

## ರಾಮದೇವರ ಸ್ತೊತ್ರ

ನೀ ನೊಲಿದೊಡೆ ತೃಣ ಮೇರುವೋ ! ನಾ ವನಚರನಾಗಿ ಪುಟ್ಟಿ ಅಜನಾದೆನು !

ರಾಜೀವಾಕ್ಷ ನಿನ್ನಯ ದಯ ! ಸಂಜೀವನ ಬ್ರಹ್ಮಾದಿಗಳಿಗೆ ಶ್ರೀ ರಘುನಾಥ !

ರಾಮನ ಶುಭ ಲಕ್ಷಣಗಳು ಸಾಮುದ್ರಿಕ ಶಾಸ್ತ್ರದಲಿ ಸಾಲದು ಪೇಳಲ್

ಭೂಮಿಯ ಪೊತ್ತವನಿಗಸದಳ ! ನಾ ಮರ್ಕಟ ನೇನು ಬಲ್ಲೆ ನಮ್ಮ ಫಣಿಸಲ್ !!

ಜಯಜಯ ರಾಮಚಂದ್ರ ! ಜಲಜಾಕ್ಷ ಕುಲಾಲುವರ್ಣ ! ಪೂರ್ಣ ಚಂದ್ರನೆ !

ಜಯಜಯ ರಾಮಭದ್ರ ! ವಿಲಸದ್ಗುಣ ಪುಂಜ ! ದಯಾ ಸಮುದ್ರನೇ!!

ಜಯಜಯ ಸಾರಸಾಕ್ಷ ! ತ್ರಿದಿಶಾರ್ಚ್ಚಿತ ದಾನವ ಲೊಕ ಶಿಕ್ಷನೇ !

ಜಯಜಯ ನಾರಸಿಂಹ ! ಭವ ಸಾಮಜಸಿಂಹ ! ನಮೊ ನಮಹ !!

ರಾಮನಾಮದ ಮುತ್ತಿನ್ಹಾರ ದೊರಕಿತೆನಗೆ! ಪೂರ್ವ ಜನ್ಮದ ಪುಣ್ಯ ಫಲದಿಂದಾ

ಮತ್ಸ್ಯ ನೆಂಬೋ ದಿವ್ಯ ಮಾಣಿಕದಾ ಹರಳು ಕೂರ್ಮ ನೆಂಬೋ ಕುಣಿಕೆಗಳು !

ವರಹನೆಂಬೋ ಒಳ್ಳೆ ಮೋಹರೇದಾ ಚಿನ್ನ

ನಾರಸಿಂಹ ನೆಂಬುವಂಥ ನಾಮದಾ ಸರಮುತ್ತು ಕೀಲುಗಳ ಕಿತ್ತೂ !! 1 !!

ವಾಮನಾನೆಂಬೋ ಒಳ್ಳೆ ವಲಿವೋ ಏಕಾವಳೀ ಬಲವಚೆರನೆ ಕಡಿದ ಪರಶುರಾಮನೆಂಬೋ ಪಟ್ಟದಾ ಹರಳುಗಳು !
ರಾಮ ಕ್ರಿಷ್ಣರೆಂಬುವಂಥ ಹವಳದಾ ಬಿಡಿಮುತ್ತು ಸಜ್ಜನರಲ್ಲಿತ್ತೊ !!2!!

ಬಹುಧಳೀ ಬಿಗಿದಿತ್ತು ಅಲ್ಲಿ ಬಿಡಿ ಮುತ್ತು ಕಲ್ಕ ನೆಂಬೋ ಕುಣಿಕೆಗಳಚ್ಚಿತೊ!

ಪುರಂದರ ವಿಠಲನ ನೆನೆದವರಾಪತ್ತು  ಪರಿಹರಿಸುತಲಿತ್ತೂ!!

## ಅಶ್ವತ್ಥ ನಾರಯಣ ಸ್ತೊತ್ರ

ಮೂಲತೋ ಬ್ರಹ್ಮರೂಪಾಯ ಮದ್ಯತೋ ವಿಷ್ಣುರೂಪಿಣೇ ಅಗ್ರತಃ ಶಿವರೂಪಾಯ ವೃಕ್ಷರಾಜ ನಮೊಸ್ತುತೆ !

ನಾರದರು ಧರ್ಮಜರು ಈರ್ವರೊಂದಾಗಿ ಬಂದರು ಮಂದಾಕಿನಿಯ ತೀರಕಾಗಿ !

ತೀರವಾಸದಲೊಂದು ವೃಕ್ಷ ವಿರುತಿರಲು ! ನೊಡಿದರು !

ಶುಭವಾಗಿ ಸಂಪತ್ಕರವಾಗಿ ಇರುವುದು !!

ಮೂಲದಲ್ಲಿ ಬ್ರಹ್ಮ ವಾಸವಾಗಿಹನು ! ಮಧ್ಯದಲ್ಲೇ ವಿಷ್ಣು ಅಭಯ ಕೊಡುತಿಹನು !

ಅಗ್ರದಲ್ಲಿ ಶಿವನು ತಾಂಡವ ವಾಡುತಿಹನು ! ಬೆಡಿದವರಿಗೆ ಬೇಕಾದ ವರಗಳನು !!

ಬ್ರಾಹ್ಮಣಾ  ಈವೃಕ್ಷ  ಪೂಜೆ ಮಾಡಿದರೆ ಸೌಭಾಗ್ಯ ಸಂಪತ್ತಕರಗಳನೆ ಕೊಡುವಾ

ಮುತ್ತೈದೆ ಈವೃಕ್ಷ ಪೂಜೆಮಾಡಿದರೆ ಪುತ್ರರೂ ಪುರುಷರೂ ಸುಖವಾಗಿರುವರೆಂದಾ !

ಕನ್ನಿಕೆಯರು ಈ ವೃಕ್ಷ ಪೂಜೆ ಮಾಡಿದರೆ ಕಾಲಕ್ಕೆ ಕಲ್ಯಾಣ ವಾಗೊದು ಎಂದಾ !!

ಪತಿ ಇಲ್ಲದ ಸ್ತ್ರೀಯರೂ ಬಾಲ ವಿಧವೆಯರು ಈ ವೃಕ್ಷ ಪೂಜೆ ಮಾಡಿದರೆ ವಿಷ್ಣು ಸಾಮ್ರಾಜ್ಯಕ್ಕೆ ಇದು ದಾರಿ ಎಂದಾ!!

ಕೊಮಟಿ ಈ ವೃಕ್ಷ ಪೂಜೆ ಮಾಡಿದರೆ ! ಕೋಟಿ ಧನವೆತ್ತಿ ವರ್ತಕವ ನಡೆಸುವನು ! ವ್ಯಾಪಾರದಲ್ಲಿ ಸಂಪನ್ನನಾಗುವನು !!

ಅಶ್ವತ್ಥದಡಿಯಲ್ಲಿ ಜಪವು ಮಾಡಿದರೇ ಕೋಟಿ ಗೊದಾನ ಪಲ ಬಾಹೋದು ಎಂದಾ

ಅಶ್ವತ್ಥಕ್ಕೆ ಪ್ರದಕ್ಷಿಣೆ ನಮಸ್ಕಾರ ಮಾಡಿದರೇ ವೈಕುಂಠದಲ್ಲೇ ವಾಸವಗಿಹರು !!

-----0------

## ಸೇತು ಬಂಧನ

ಆದಿ ಮೂಲ ಸೇತು ಕಟ್ಟಬೇಕೆನುತ ಇಟ್ಟರೊಂಬತ್ತು ಪಾಷಾಣ ಪೂಜೆಯ ಮಾಡಿದನು ಜಾಣಾ!

ತಾನಡೆದನಾಕ್ಷಣಾ ಸಾಗರವು ದಾರಿಬಿಡಲಿಲ್ಲೆನುತ ಮಾಡಿದನು ಚಿಂತೆ ! ದರ್ಭ ಶಯನನಾಗಿ ಪವಡಿಸಿದ ರಾಮಾ! ಮಾಯಾ ತನ್ನ ಅಗಾಧ ಮಾಯಾ ಸಾಗರಾ ಗಡಿಬಡಿಸಿದಾನು ! ಸಮುದ್ರ ತಾಬಂದು ಸ್ವಾಮಿಗೆ ಕೈಯಮುಗಿದಾನು ದರ್ಭ ಸಾಕು ಮಾಡಿ ! ಅಂಜಬೇಡವೊ ಸ್ವಾಮಿ ದಾರಿ ಬಿಡತೇನು ನಾನು ಸೇತುವೇ ಕಟ್ಟಿಸೋ ನೀನು ! ಎಡಕೆ ರತ್ನಾಕಾರ ಬಲಕೆ ಮೊಹನ ಕಾರ ಮಧ್ಯದೀ ನಿಂತ ರಘುವೀರ ಕಾಲಕಾ ಶೂರ ಸಕಲ ಗುಣ ಗಂಭೀರ ರಣ ರಂಗ ಧೀರಾ ! ಹನುಮಂತಸುಗ್ರೀವರಾಮಲಕ್ಷ್ಮಣರು ಕೂಡಿಏಕಾಂತವಾಡಿ ! ಘಟ್ಟ ಬೆಟ್ಟವನೆ ತಂದು ಮುನ್ನೂರ

ಮೂವತ್ತು ಗಾವುದಕೆ ಸೇತುವೆಯ ಕಟ್ಟಿ ! ಶ್ರೀ ರಾಮ ರಾವಣನ ಕೊಂದ ಜಾನಕಿಯ ತಂದ ರಾಮೇಶ್ವರದಲಿ ನಿಂದ

ರಾಮ ಗುಡಿಕಟ್ಟಿ ಹನುಮಂತನಾ ಕರೆದು ಬ್ಯಾಗದಲಿ ಕಾಶಿಗೆ ಹೊಗಿ ಲಿಂಗವನೆ ತಕ್ಕೊಂಡು ಬಾ ಬ್ಯಾಗನೇ ಎಂದನು ! ಅಂದ ಮಾತನೆ ಕೇಳಿ ಬಂದನೆ ಕಪಿಕಟಕ ಸಂಭ್ರಮದಿಂದ ಗಂಗೆವಳಿಗೆ ಮುಳುಗಿ ಲಿಂಗವ ತೆಗೆದು ನೋಡಿ ! ಚೆಂದಾಗಿಲ್ಲ ಶಿವಲಿಂಗಾ ಮೆಚ್ಚಲಾರನೋ ನಮ್ಮ ರಂಗಾ ! ಮರಳಿ ಮುಳಗಿ ಅದೇ ಲಿಂಗವು ಬರಲು ಆದರಾಗಲಿ ಎಂದು ನಾಲ್ಕು ಘಳಿಗೆ ತಡದಾ ! ರಾಮ ಮಳಲನೆ ತೆಗೆದು ಲಿಂಗವನೆ ಮಾಡಿ ಪೂಜೆಯನು ಮಾಡಿದನೆ ಜಾಣ ! ಹನುಮಂತ ಬಂದನತಿಬೇಗ ಇದು ಎನುಸ್ವಾಮಿ ಎನುತ ಕೇಳಿದನು ಆಗ ! ವ್ಯಾಳ್ಯಾ ಮೀರಿತು ಎನಗೆ ಎಂದು ಶಾಸ್ತ್ರಕೆ ಮಾಡಿದೆನು ಮಳಲ ಲಿಂಗ! ಪೂಜೇಗೆ ತೆಗೆದುಬಿಡು ನೀನದಾವಲಿಂಗವಾದರೇನು ಬಾಲಲಿಂಗಕೆ ಸುತ್ತಿಬಲವನೆಲ್ಲಾ ಹಾಕಿ ತೆಗೆಯಲಾರದೆ ಮುಖ್ಯಪ್ರಾಣ ಘಟ್ಟ್ಯಾಗಿ ಕೂತಿದೆ ಲಿಂಗಾ ! ಧರಣಿ ಮ್ಯಾಲೆ ಬಿದ್ದು ಗಡಕುಟ್ಟಿ ಉರುಳಾಡಿದಾ ಮೂಗು ಮಾರಿ ಒಡಾಕೊಂಡಾ ! ತನ್ನೊಳಗೆ ತಾನೊಂದುಕೊಂಡ !

ಬಾರಯ್ಯ ಸಂಜೀವನ ಬೆಟ್ಟ ತಂದಿಯೆ ನೀನು ಕೊಪವ್ಯಾತಕೋ ಹನುಮಂತ ನೀ ಬಲವಂತ ಇನ್ನಾಗು ಶಾಂತ ಎನ್ನ ಸನ್ನಿಧಿಯಲ್ಲಿ ಎನ್ನ ಸೇವಕನಾಗಿ ನಿನ್ನ ಗುಡಿ ಕಟ್ಟಿಸೋ ಮುಂದೆ ನಾನಿನ್ನ ಹಿಂದೆ ಇಬ್ಬರೊಂದಾಗಿ ಇರೊಣ

ಕಾಶಿಮಾಧವಗೆ ಕಾಶಿ ಕಾವಡಿ ಕಟ್ಟಿಸಿದರು ಬಿಂದು ಮಾಧವಗೆ ಹವಳದ ಕಾವಡಿ ನೋಡುವರು ಮಂದಿ ರಾಮ ಲಿಂಗನ ರಾಣಿ ಗಂಗಾಭವಾನಿ ಹಿರಿಯಾಕಿ ಪರ್ವತರಾಜನ ಪುತ್ರಿ ಪಾಪ ಹಾರಿಣಿ ನಿತ್ಯ ಕಲ್ಯಾಣಿ ಪಾಪ ಮಾಡಿದವರು ಗರುಡಗಂಬದ ಸುತ್ತ ಪ್ರಾಣಚಾರಿ ಬೀಳೋರು ತಲೆ ಸುತ್ತಿ ಆಡೋರು ದೇವಿಯನೆ ನೋಡುವವರು ಗಂಧ ಮಾದನ ಪರ್ವತಕೆ ಹೋಗುವರು ಇಪ್ಪತ್ತನಾಲ್ಕು ತೀರ್ಥಸ್ನಾನ ರಘುಪತಿಯ ಧ್ಯಾನ

ಸಮುದ್ರದ ಸ್ನಾನ ಮಾಡಿದರೆ ಗೋಹತ್ಯ ಗುರುಹತ್ಯಾ ಸ್ತ್ರೀ ಹತ್ಯಾ ಶಿಶು ಹತ್ಯಾ ಮಾಡಿದ ಪಾಪ ಹೋಗೊದು

ರಾಮಲಿಂಗ ದರುಶನಾ ಶ್ರೀ ಪುರುಂದರ ವಿಟ್ಟಲನ ಧ್ಯಾನ